

## ಚಿದಾನಂದ ಸಾಲಿ

ವಿದ್ಯಾರ್ಥಿಗಳಿಗೆ ಕಲಿಸುವ ಹಾಗೂ ಸ್ವತಃ ಏನಾದರೊಂದು ಕಲಿಕೆಯಲ್ಲಿ ಸದಾ ಮಗ್ನರಾಗಿರುವ ಚಿದಾನಂದ ಸಾಲಿ, ಶಾಲೆಯಾಚೆಗೂ ತಮ್ಮ ಮೇಷ್ಟ್ರತನ ವಿಸ್ತರಿಸಿಕೊಂಡಿರುವ ಬರಹಗಾರ. ಗಣಿತಶಾಸ್ತ್ರ, ಪತ್ರಿಕೋದ್ಯಮ, ಕನ್ನಡದಲ್ಲಿ ಸ್ನಾತಕೋತ್ತರ ಪದವೀಧರ. ಕನ್ನಡ ಕಥಾಲೋಕಕ್ಕೆ ಸುಡುಕೆಂಡಗಳಂತಹ ಕಥೆಗಳನ್ನು ಕೊಟ್ಟಿರುವ ರಾಯಚೂರು ಸೀಮೆಯ ಪ್ರಮುಖ ಕಥೆಗಾರರಲ್ಲೊಬ್ಬರಾದ ಅವರು – ಕಾವ್ಯ, ಅನುವಾದಗಳಲ್ಲೂ ಸೈ ಅನ್ನಿಸಿಕೊಂಡಿರುವವರು.

'ರೆ', 'ಮೌನ', 'ಧರೆಗೆ ನಿದ್ರೆಯು ಇಲ್ಲ', 'ಚೌಕಟ್ಟಿನಾಚೆ', 'ಶಿಕ್ಷಣ ಮತ್ತು ಜೀವನಶೈಲಿ', 'ಕಾಲಕನ್ನಡಿ', 'ಕರುಳ ತೆಪ್ಪದ ಮೇಲೆ', 'ಕಡಲಹಕ್ಕಿಯ ರೆಕ್ಕೆ', 'ಕನ್ನಡ ಗಜಲ್' ಅವರ ಕೆಲವು ಕೃತಿಗಳು. 'ಎಲೆಯುದುರೂ ಕಾಲ', 'ಕಾಲಸಾಕ್ಷಿಯಾಗಿ', 'ಯಜ್ಞ', 'ಮೋಹನಾ ಓ ಮೋಹನಾ!', 'ನೀಲಿ ಸರೋವರ', 'ಲೀಲಾಳ ಚಮತ್ಕಾರ', 'ಸ್ವಪ್ನಲಿಪಿ' ಅನುವಾದಿತ ಪುಸ್ತಕಗಳು. ಈಗಷ್ಟೇ ಓದುಗರ ಕೈಗಳಲ್ಲಿ ತೆರೆದುಕೊಳ್ಳುತ್ತಿರುವ 'ಮೂರನೇ ಕಣ್ಣು' ಕೃತಿಯ ಮೂಲಕ ಪ್ರಬಂಧಕಾರರಾಗಿಯೂ ಗುರ್ತಿಸಿಕೊಂಡಿರುವ ಸಾಲಿ ಅವರ ಹಲವು ಆಸಕ್ತಿಗಳು ಹಾಗೂ ಮಾನವೀಯ ತುಡಿತಗಳ ಅಭಿವ್ಯಕ್ತಿಯ ಹೊಸಚಾಚಿನ ರೂಪವೇ 'ಮಳೆ' ಕಿರು ಕಾದಂಬರಿ.

ಕಕ್ಕಾಬಿಕ್ಕಿಯಾಗುವಂತೆ ಇಡೀ ಊರು ಗಲಿಬಿಲಿಗೊಂಡಿತ್ತು. ಮುಗಿಲೆಂಬ ಮುಗಿಲು ಎಲ್ಲ ಕೆಳಗಿಳಿಸಿ ನಿರಾಳವಾಗಿ ನಿಚ್ಚಳವಾಗಿ ಬೆಳ್ಳಗೆ ಹೊಳೆಯುತ್ತಲಿದ್ದರೆ; ಗಟಾರಗಳು ಉಸಿರುಗಟ್ಟಿ ಅದರ ನೀರೆಲ್ಲ ರಾಜಾರೋಷವಾಗಿ ರಸ್ತೆಯ ಮೇಲೆ ಕಾಲುವೆಯಂತೆ ಹರಿಯತೊಡಗಿದ್ದವು. ಒಂದು ಸಲ ಹೊರಗೆ ಹೋಗಿ ಎಲ್ಲ ನೋಡಿಬರಬೇಕೆನಿಸಿತು ತಿಮೋತಿಗೆ. ಪತ್ರಕರ್ತ ಬುದ್ಧಿಗೆ ಪರಿಹಾರಕ್ಕಿಂತ ಸಂದರ್ಶನ ಮತ್ತು ಪ್ರದರ್ಶನದಲ್ಲೇ ಹೆಚ್ಚು ಆಸಕ್ತಿ ಎಂದು ಹೇಳುತ್ತಿದ್ದ ಜರ್ನಲಿಸಂ ಪ್ರೊಫೆಸರ್ ರಾಮಲಿಂಗಂ ಅವರನ್ನು ನೆನೆಸಿಕೊಂಡು ಹೆಮ್ಮೆಪಡುತ್ತ ಚಪ್ಪಲಿ ಧರಿಸಿ ಹೊರಬಿದ್ದ.

ಮುರಿದು ಬಿದ್ದ ಮರಗಳು. ತುಂಡಾದ ರಸ್ತೆ. ಯಾರದೋ ಮನೆಯ ಮುಂಭಾವಣಿ ಬಿದ್ದಿದ್ದರೆ ಮತ್ತ್ಯಾರದೋ ಹಿತ್ತಿಲು. ಬಜಾರಿನಲ್ಲಿ ಸಡನ್ನಾಗಿ ಬಟ್ಟೆ ಸಡಿಲವಾದಾಗಿನಂಥ ಭಯಾತಂಕಗಳಲ್ಲಿ ಜನ ಅವನ್ನು ಪ್ಲಾಸ್ಟಿಕ್ಕು ಬರಕ, ಹಳೆ ಚಾಪೆ, ಚಾದರಗಳಿಂದ ಮುಚ್ಚಲು ಹೆಣಗುತ್ತಿದ್ದರು. ಮ್ಯಾನ್‌ಹೋಲ್‌ಗಳು ಬ್ಲಾಕಾಗಿ ಮನೆಗಳೊಳಗಿನ ಶೌಚಾಲಯದ ಕುಡ್ಡಿಗಳಲ್ಲಿ ಗಲೀಜು ನೀರು ಎದುರು ಪುಟಿದು ಬರುತ್ತಿದ್ದವು. ಇಡೀ ನಗರದ ಪ್ಲಾಸ್ಟಿಕ್ಕು, ಕಸ, ಪಾರ್ಥೇನಿಯಂ ಕಳೆ, ಮತ್ತೊಂದು, ಮಗದೊಂದು ಎಲ್ಲವನ್ನು ಮೈಮೇಲೆ ಹೇರಿಕೊಂಡು ರಸ್ತೆಯೆಂಬೋ ರಸ್ತೆ ಗಲೀಜು ನಾರುತ್ತಿತ್ತು. ಭಾರಿ ಬೋಂಗಾಗಳು ಬಿದ್ದುದರಿಂದ ದಾರಿಗಳು ಬಂದಾಗಿ ಜನ ಸುತ್ತು ಬಳಸಿಕೊಂಡು ಹೋಗುತ್ತಿದ್ದರು. ಬಸ್‌ಸ್ಟ್ಯಾಂಡ್ ಮುಂದಿರುವ ಬೃಹತ್ ಬೇವಿನ ಮರ ಬುಡಮೇಲಾಗಿ ಬಿದ್ದುಕೊಂಡಿತ್ತು. ಕಣ್ಣು ಹಾಯಿಸಿದೆಡೆಯೆಲ್ಲ ಮುಖಗಳಲ್ಲಿ ಪ್ರೇತಕಳೆ, ಮನೆಗಳಲ್ಲಿ ಸ್ಮಶಾನಸಾದೃಶ್ಯವನ್ನು ಕಾಣುತ್ತ ಬೆನ್ನಹುರಿಯಲ್ಲಿ ಭಯದ ಸೆಳಕೊಂದು ಸಳಸಳ ಹರಿದಾಡಿದಂತಾಗಿ ನಿಂತಲ್ಲೇ ಸಣ್ಣಗೆ ನಡುಗಿದ ತಿಮೋತಿ.

ಹಿಂದಿನಿಂದ ಯಾರೋ ಭಾರವಾದ ಕೈ ಹಾಕಿದಂತೆ ಭಾಸವಾಗಿ ತಿರುಗಿ ನೋಡಿದ.

ಪರಿಮಳ ಚಾನೆಲ್ಲಿನ ಪ್ರಹ್ಲಾದ ನಿಸ್ತೇಜವಾಗಿ ನಕ್ಕ. ಅವನ ಮುಖದಲ್ಲೂ ಅದೇ ಕಳೆ.

ಶಿವಾನಂದ ಹೋಟೆಲಿನಲ್ಲಿ ನಾಷ್ಟಾಕ್ಕೆ ಆರ್ಡರ್ ಮಾಡಿ ಪ್ರಹ್ಲಾದನ ಮಾತುಗಳಿಗೆ ಕಿವಿಯಾಗುತ್ತಲೇ ಪೇಪರುಗಳ ಮುಖಪುಟಗಳ ಮೇಲೆ ಕಣ್ಣಾಡಿಸಿದ.

'ಇಡೀ ಡಿಸ್ಟಿಕ್ ಇಂಗೇ ಆಗ್ಯಾದ ನೋಡು ದೋಸ್ತ್ ಮಳೆ. ಮುಂಜಾಲೆ ಎದ್ದೆಳಣ ಸುದ್ದಿ ಕಳಿಸಿಬುಟ್ಟೆ. ಒಂದು ಕೆಲ್ಸಾಯ್ತು. ಇನ್ನ ಮೂರ್ನಾಲ್ಕು ದಿನ ಇದೇ ಸುದ್ದಿ; ಯಾ ಚಾನೆಲ್ಲನ್ನ ನೋಡು' ಅಂದ. ಪೇಪರುಗಳಲ್ಲೂ ಎಲ್ಲ ಕಡೆ ಅದೇ ಸುದ್ದಿಯಿದ್ದುದನ್ನು ತಿಮೋತಿ ಗಮನಿಸಿದ. ಮಳೆಯ ಆರ್ಭಟಕ್ಕೆ ಅರ್ಧ ರಾಜ್ಯವೇ ತತ್ತರಿಸಿಹೋಗಿತ್ತು. ಹತ್ತಾರು ಜನ ಅಸು ನೀಗಿದ್ದರು. ನೂರಾರು ಜನರಿಗೆ ಗಾಯಗಳಾಗಿದ್ದವು. ಸಾವಿರಾರು ಮನೆಗಳು ನೆಲಕ್ಕುರುಳಿದ್ದವು. ಜಾನುವಾರುಗಳು ಜೀವ ಕಳೆದುಕೊಂಡಿದ್ದವು. ಹೊಲಗಳಿಗೆ ನೀರು ನುಗ್ಗಿ ಬೆಳೆಗಳೆಲ್ಲ ಸರ್ವನಾಶವಾಗಿ ಹೋಗಿದ್ದವು.

ಪ್ರಹ್ಲಾದನ ಫೋನ್ ರಿಂಗಾಯಿತು.

'ಹಲೋ'

'ಸಾಹೇಬ್ರೇ ನಮ್ಮೂರಿಗೆ ಬರಾ ಬ್ರಿಜ್ ಬಿದ್ದೋಗ್ಯಾದ್ರಿ. ಬರಾಕ ಓಗಾಕ ದಾರಿ ಇಲ್ದಂಗಾಗ್ಯಾದ. ನೀವೊಮ್ಮೆ ಬಂದೋದ್ರೆ ಚಂದಿತ್ತು.'

'ಅಲ್ಲಪಾ ಬ್ರಿಜ್ಜೇ ಬಿದ್ದೋದ ಮ್ಯಾಲೆ ನಾನೆಂಗ ಬರ್ಲಿ?'

'ಬ್ರಿಜ್ ಅಕ್ಕಡಿಂದನೆ ಪೋಟ ತಕ್ಕಂಡು ಟೀವ್ಯಾಗ ಹಾಕ್ರಿ ಸಾಬ್ರೆ. ಅಂಗಂದ್ರೆ ಯಾರನ್ನ ಬರ್ತಾರ. ಇಲ್ಲಂದ್ರೆ ನಮ್ ಹಳ್ಳಿ ಕೊಂಪೆ ಕಡೆ ಯಾರು ಬರ್ಬೇಕು?'

ತಿಮೋತಿ `ಯಾರು?' ಎಂಬಂತೆ ಪ್ರಹ್ಲಾದನನ್ನು ನೋಡಿದ. ಮೊಬೈಲಿಗೆ ಕೈ ಅಡ್ಡ ಇಟ್ಟು'ಮಾಹಿತಿ ಹಕ್ಕು ಮಾಂತೇಶ' ಅಂದ ಪ್ರಹ್ಲಾದ. ಅವನಿಗೆ ಪತ್ರಕರ್ತರು ಇಟ್ಟಿರುವ ಅಡ್ಡ ಹೆಸರದು. ಬಿಸ್ಲೂರಿನಿಂದ ಎಂಟು ಕಿಲೋಮೀಟರ್ ದೂರದ ಹಳ್ಳಿಯ ಈ ಮಾಂತೇಶ, ನಲವತ್ತು ಲಕ್ಷ ರೂಪಾಯಿ ಮನೆ ಕಟ್ಟಿಕೊಂಡು ಕಾರು ಇಟ್ಟಿದಾನೆ. ದಿನದ ಮೂರೂ ಒಪ್ಪತ್ತು ಉಣ್ಣೋದು ಮಾತ್ರ ಬಿಸ್ಲೂರಲ್ಲೇ. ಪತ್ರಕರ್ತರು, ಪೋಲಿಸರು ಮತ್ತು ಪಾಲಿಟೀಶಿಯನ್ಸ್ ಜತೆಗೆ ಅವನ ಒಡನಾಟ ಜಾಸ್ತಿ. ಒಳ್ಳೆ ಮನುಷ್ಯ, ಯಾವತ್ತಿಗೂ ನಗ್ತಾ ಇರ್ತಾನೆ. ಆಫೀಸರ್ಸ್ ಮಾತ್ರ ಇವನ ಹೆಸರು ಹೇಳಿದ್ರೆ ಉರಿದುರಿದು ಬೀಳ್ತಾರೆ.

'ಅಲ್ಲಪ ನಮ್ಮನಿಗೇ ಹೋಗಾಕ ದಾರಿಲ್ಲ. ನಿಮ್ಮೂರಿಗೆಲ್ಲಿ ಬರ್ಲಿ ಮಾರಾಯ? ಅದಲ್ದ ನಿಮ್ಮೂರಿಗಿ ದಾರಿನೂ ಗೊತ್ತಿಲ್ಲ ನನಗ. ಎಕ್ಕಡಿಲಿಂದ ಬರಬೇಕು ಹೇಳು' ಕಿಚಾಯಿಸಿದ ಪ್ರಹ್ಲಾದ.

'ಏನ್ ಸಾರು ಹಿಂಗಂತಿದ್ದಿ? ಈ ಬ್ರಿಜ್ ಓಪನಿಂಗಿಗೆ ಮಿನಿಸ್ಟ್ರು ಸಾಯೇಬ್ರ ಜತಿ ಬಂದಿದ್ಯಲ್ಲ ಸಾರು. ಆವಾಗ್ಲೇ ಮತ್ರ್ಯಾ?' ಅಂದ. ಅವನ ವರಸೆಗೆ ತಿಮೋತಿಗೆ ನಗು ಬಂದು, ಮರೆಮಾಚಲು ಪೇಪರ್ ಎತ್ತಿ ಹಿಡಿದು ಓದತೊಡಗಿದ. ಸ್ಪೀಕರ್ ಆನ್ ಮಾಡಿದ್ದು ನಂದೇ ತಪ್ಪು ಎಂದು ಹಳಿದುಕೊಳ್ಳುತ್ತ ಪ್ರಹ್ಲಾದ ಅದನ್ನು ನಾರ್ಮಲ್ ಮೋಡಿಗೆ ತಂದು

'ಆಯ್ತೇಳಪ ಬರಮು. ಅದ್ರಾಗೇನು? ಈಗ ನಾಷ್ಟಾ ಮಾಡಾಕತ್ತೀನಿ. ಆಗಣ ಅಲ್ಲಿಗೇ ಬರ್ತೀನಿ. ಆಯ್ತಾ?' ಎಂದು ಡಿಸ್‌ಕನೆಕ್ಟ್ ಮಾಡಿದ.

ಸ್ವಲ್ಪ ತಡೆದು ದನಿ ಎತ್ತರಿಸಿ

'ನಿಮ್ದೇ ಪುಣ್ಯ ನೋಡಪ. ಆರಾಮಿರ್ತೀರಿ. ಸಂಜೆತನಕ ಟೀವಿ ನೋಡಿ, ರೇಡಿಯೋ ವಾರ್ತೆ ಕೇಳಿ ಸುದ್ದಿ ರೆಡಿ ಮಾಡಾಕ ಟೈಮನ್ನ ಇರ್ತಾದ. ಕಲ್ಲಪ್ಪ ಸಾಬ್ರಂಗ ಸಂಜೆ ಪೇಪರ‍್ಗಳ ಮ್ಯಾಲೆ ಸಂಸಾರ ಮುಗಸೋರೂ ಸಾವಿರಾರು ಮಂದಿ ಇರ್ತಾರ ಆ ಮಾತು ಬ್ಯಾರೆ. ನಮ್ದು ನೋಡು ಹೆಂಗಾದ.